ಅಮ್ಮ ಹೈರಾಣಾಗಿ ಹೋಗಿದ್ದಳು... ಅಪ್ಪನಿಗೆ ಗರಿಯ ಜೊತೆ ಸಾರಾಯಿಯೂ ಬಂತು. ಕೊನೆ ಕೊನೆಗೆ ಮನೆಗೂ ಬಂತು. ಹೊತ್ತಲ್ಲದ ಹೊತ್ತಲ್ಲಿ ಜನರನ್ನು ಕರೆದುಕೊಂಡು ಬರುವುದು, ಸಾರಾಯಿ ಕುಡಿಯುವುದು ಬಾಡಿನೂಟ ಮಾಡು ಅಂತ ಅಮ್ಮನನ್ನು ಪೀಡಿಸುವುದು. ಅಮ್ಮ ಈ ಅವಸ್ಥೆಯಲ್ಲಿ ಕಂಗಾಲಾಗಿ ಬಿಟ್ಟಳು. ರಾತ್ರೀ ಇಡೀ ಪ್ರತಿದಿನ ನನ್ನನ್ನು ಮಗ್ಗಲಲ್ಲಿ ಮಲಗಿಸಿಕೊಂಡು 'ಚಂದ್ರು, ಚಂದ್ರು' ಅಂತ ಅಳುತ್ತಿದ್ದಳು. ಆಗ ನಾನೂ ಅಳುತ್ತಿದ್ದೆ. ಬೆಳಗಿನ ಜಾವ ಎದ್ದು ನನ್ನನ್ನು ಎಬ್ಬಿಸಿ 'ಓದು ಓದು ದೊಡ್ಡ ಮನುಷ್ಯನಾಗು' ಎನ್ನುತ್ತಿದ್ದಳು...

ಆಗಲೇ ನನ್ನ ಕನಸುಗಳು, ಮುಲ ಮುಲಗುಡುತ್ತಿದ್ದವು. ನಾನು ಓದಬೇಕು, ದೊಡ್ಡ ಮನುಷ್ಯನಾಗಬೇಕು. ಅಮ್ಮನನ್ನು ಕಾರಿನಲ್ಲಿ ಕುಳ್ಳರಿಸಿಕೊಂಡು ಹೋಗಬೇಕು... ಇಂಥ ಒಂದು ದಿನ ಸನ್ನ ಸೋದರ ಮಾವ ಬಂದಿಳಿದ... ನಾನು ಎಸ್.ಎಸ್.ಎಲ್.ಸಿ. ಪಾಸಾಗಿದ್ದೆ. ಮಾವ ಬಂದವನು ಊಟ ಮಾಡಿದವನು ನೇರವಾಗಿ 'ಬಾವನವರೇ, ಮಾತಿಷ್ಟೇ. ನಿಮ್ಮ ಮಗ ಇಲ್ಲಿ ಓದೋದು ಮುಗಿಯಿತು. ಅವನನ್ನು ಬೇರೆ ಪಟ್ಟಣಕ್ಕೆ ಕಳುಹಿಸಬೇಕು. ನನ್ನ ಮಗ ಸಹ ಮೈಸೂರಿನಲ್ಲಿ ಓದ್ತಾನೆ ಒಟ್ಟಿಗೇ ಓದಲಿ' ಎಂದರು. ಅಪ್ಪನಿಗೆ ತಪ್ಪಿಸಿಕೊಳ್ಳಲು ಆಗಲಿಲ್ಲ... ಆ ದಿನ ರಾತ್ರಿ ಅಮ್ಮನಿಗೆ ಬೈಯುತ್ತಾ... ಹೆಂಡ ಕುಡಿಯುತ್ತಾ... 'ಏನು ನೀನೇ ಏನೇ ನಿನ್ನಣ್ಣನನ್ನು ಬರಹೇಳಿದ್ದು. ಯಾವ ಜಾಗೀರದಾರನೇ ಅವನು... ನಾನು ಛೇರ್‌ಮನ್ ರಂಗಪ್ಪಗೌಡ. ಗೊತ್ತಾಯ್ತೇನೆ ಮೂದೇವಿ...' ಸಾರಾಯಿ ಕುಡಿದುಕೊಂಡು ಕೂಗಾಡಿದ.

ನಾನು ಮೈಸೂರಿಗೆ ಹೊರಟಾಗ ಸ್ವಲ್ಪ ಹಣ ಕೊಟ್ಟ, ಎಷ್ಟಾದರೂ ಹುಟ್ಟಿಸಿದ ಅಪ್ಪನಲ್ಲವೇ– ಆಗಲೇ ನಾನು ಮೈಸೂರೆಂಬ ಬೆಳಕಿನ ಊರ ಕಂಡಿದ್ದು. ನಮ್ಮದೇ ಸಮುದಾಯದ ಒಂದು ಹಾಸ್ಟೆಲ್ ಇತ್ತು. ಅಲ್ಲಿ ಒಂದು ರೂಮಿನಲ್ಲಿ ಆರು ಜನರಿದ್ದರು. ಒಬ್ಬರ ಮೇಲೆ ಒಬ್ಬರು ಮಲಗುವಷ್ಟು ಕಿರಿದಾದ ಜಾಗ. 'ಜಾಗ ಇಲ್ಲ ಕಣಲೇ' ಅಂತ ನನ್ನ ಸೀನಿಯರ್ ಯವಾಗಲೂ ನನ್ನ ಮೈಮೇಲೆ ಮಲಗಿದಂತೆ ಮಲಗುತ್ತಿದ್ದ. ರಾತ್ರಿ ಎಲ್ಲೋ ರೂಮಿನ ತುದಿಯಲ್ಲಿದ್ದವನು ಬೆಳಗಾಗುವಾಗ ನನ್ನ ಮೈಮೇಲೆ ಇಲ್ಲ ಪಕ್ಕದಲ್ಲೇ ಮಲಗಿರುತ್ತಿದ್ದ ದಾಂಡಿಗ. ದುರ್ವಾಸನೆಯ ದಾಂಡಿಗ. ಕಾಲೇಜು ಮಾತ್ರ ಚಂದವಾಗಿತ್ತು. ಎಷ್ಟು ವಿಶಾಲವಾದ, ಭವ್ಯವಾದ ಎತ್ತರವಾದ ಕಟ್ಟಡಗಳು. ಓದು ಸಾಗಿತು.

ಓದು ಸಾಗಿತು ಅಲ್ಲ ಹಾರಿತು.

ಸಮುದಾಯದ ಹಾಸ್ಟೆಲ್ ಊಟ–ತಿಂಡಿ ಹೇಗಿರುತ್ತಿತ್ತು ಹಾಗೇ ಇತ್ತು. ಎಲ್ಲೋ ಒಮ್ಮೆ ಖಾವಿಧಾರಿಯವರು ಬಂದು ಒಂದು ಸಿಹಿ ಉಂಡೆ ಕೊಟ್ಟು 'ನಿಮ್ಮಿಂದ ಸಮುದಾಯ ಉದ್ಧಾರ ಆಗಬೇಕು' ಎನ್ನುತ್ತಿದ್ದರು.

ಊರಿನ ಮೋಹ ಕೇಂದ್ರವಾಗಿದ್ದ ಅಮ್ಮ ಪದೇ ಪದೇ ರೋಗ ಪೀಡಿತಳಾಗಿದ್ದಳು. ಮಾನಸಿಕವಾಗಿ ಆಕೆ ಜರ್ಜರಿತಗೊಂಡಿದ್ದಳು.

ಅದಕ್ಕೆ ಕಾರಣ...

ಅಪ್ಪ ಈಗ ಸಂಪೂರ್ಣ ಬದಲಾಗಿದ್ದ. ಅಮ್ಮನ ಕೇರೇ ಇಲ್ಲ. ಅಪ್ಪನ ದರಬಾರಿಗೆ ಈಗ ಇನ್ನೊಂದು ಖದರ್ ಬಂದಿತ್ತು. ಆತನಿಗೆ ಏರುಗಾಲ. ಹಾಗಂತ ಆತ ತಿಳಿದುಕೊಂಡಿದ್ದ. ಈ ಖದರ್‌ನಿಂದ ಇರುವಾಗಲೇ ಊರಿಗೆ ಸರ್ವ ಆರೋಗ್ಯ ಸುಧಾರಣೆಗೆ ಮಿಡ್‌ವೈಫ್ ವಕ್ಕರಿಸಿದಳು. ಅವಳು ಬಂದಿದ್ದೇ ಬಂದಿದ್ದು ಊರಿಗೆ ಊರೇ ದಂಗು ಬಡಿಯಿತು.

ಆರೋಗ್ಯ ಸರಿ ಇದ್ದವರೂ ಅವಳ ಮನೆಗೆ ಮುತ್ತ ತೊಡಗಿದರು. ಅವಳ ಮನೆಯೂ ಆಸ್ಪತ್ರೆಯೂ ಒಂದೇ ಕಡೆ. ಹೀಗಾಗಿ ಹೊತ್ತಲ್ಲ ಹೊತ್ತಿನಲ್ಲಿ ಅವಳ ಮನೆಯ ಬಾಗಿಲು ಬಡಿಯ ತೊಡಗಿದರು.